**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸತ್ರ ಪ್ರಕರಣ ಸಂಖ್ಯೆಃ 46/2023**

ದಿನಾಂಕಃ 15.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. - 4 ಅ.ಸಾ -4

| | | |
|---|---|---|
| ಹೆಸರು | ಃ | ಶ್ರೀ. ಅಪ್ಪಾಜಯ್ಯ |
| ತಂದೆಯ ಹೆಸರು | ಃ | ಕೆಂಪೇಗೌಡ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ನೇರಳೂರು |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಇತರೆ ಆರೋಪಿಗಳು ನನಗೆ ಗೊತ್ತಿಲ್ಲ. ಮೃತ ಶಿವು ಬಗ್ಗೆ, ಆತ ಯಾವ ಊರಿನವನು ಎಂದು ನನಗೆ ಗೊತ್ತಿಲ್ಲ. ದೋಷಾರೋಪಣೆ ಪಟ್ಟಿ ಸಾಕ್ಷಿ - 5 ನನಗೆ ಗೊತ್ತಿಲ್ಲ. ನುಣ್ಣೂರಿನಿಂದ ನೇರಳೂರು 5 ಕಿ ಮೀ ಆಗುತ್ತದೆ. ಸುಮಾರು 2 ವರ್ಷಗಳ ಹಿಂದೆ ಮಧ್ಯಾಹ್ನದ ಊಟಕ್ಕೆ ಮೊದಲು ನಾನು ನಮ್ಮ ತೋಟದಲ್ಲಿ ನೀರು ಕಟ್ಟುತ್ತಿದ್ದಾಗ ಯಾರೋ ಪೊಲೀಸರು ಬಂದು ನನ್ನನ್ನು ಕರೆದು ಒಂದು ಸಹಿ ಮಾಡಿಸಿಕೊಂಡಿರುತ್ತಾರೆ. ಕೇಳಿದ್ದಕ್ಕೆ ಇಲ್ಲಿ ಬಂದ ಬಗ್ಗೆ ಸಹಿ ಬೇಕು ಎಂದು ಹೇಳಿರುತ್ತಾರೆ. ಪೋಲಿಸರು ನನ್ನನ್ನು ವಿಚಾರಿಸಿದ್ದು ನಾನು ನನಗೆ ಏನು ಗೊತ್ತಿಲ್ಲ ಎಂದು ಹೇಳಿದ್ದೆ. ಈ ಪ್ರಕರಣ ಕುರಿತು ಬೇರೆ ಏನು ನನಗೆ ಗೊತ್ತಿಲ್ಲ. ದಿನಾಂಕ 30.10.2022 ರ ಅಮಾನತ್ತು ಪಂಚನಾಮೆಯಲ್ಲಿನ ಸಹಿಯನ್ನು ತನ್ನ ಸಹಿ ಎಂದು

ಗುರುತಿಸಿದ್ದು. ಸದರಿ ಪಂಚನಾಮೆಯನ್ನು **ನಿಪಿ-5** ಎಂದು, ಸಾಕ್ಷಿ ಸಹಿಯನ್ನು **ನಿಪಿ-5** ಎ ಎಂದು ಗುರುತಿಸಲಾಯಿತು. ತಮ್ಮಣ್ಣನ ಜಮೀನಿಗೆ ಮಹಜರ್ ಗೆ ಬಂದಿದ್ದೇವೆ ಎನ್ನಲು ಸಾಕ್ಷಿ ಬೇಕು ಎಂದು ಸಹಿ ಹಾಕಿಸಿಕೊಂಡಿರುತ್ತಾರೆ. ಪೋಲಿಸರು ಕೊಲೆ ಸಂಬಂಧವಾಗಿ ಬಂದಿರುವುದಾಗಿ ಹೇಳಿದ್ದರು. ಸ್ಥಳದಲ್ಲಿ ಬೇರೆ ಏನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಮತ್ತು ನಿಪಿ-5 ಪಂಚನಾಮೆ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 29.10.2022 ರಂದು ಬೆಳಿಗ್ಗೆ 6.00 ಗಂಟೆ ಸಮಯಕ್ಕೆ ನಾನು ಮತ್ತು ದೋ.ಪ.ಸಾಕ್ಷಿ-5 ಜಾಮೀನು ಕಡೆಗೆ ಹೋಗಲು ಮಾತಾನಾಡಿಕೊಂಡು ನಿಂತಿದ್ದೇವು ಎನ್ನುವುದು ಸರಿ ಅಲ್ಲ. ನಾನು ಮತ್ತು ದೋ.ಪ.ಸಾಕ್ಷಿ-5 ನಮ್ಮ ಊರ ತಮ್ಮಣ್ಣನ ತೆಂಗಿನ ತೋಟದ ರಸ್ತೆಯಲ್ಲಿ ಕೊಲೆ ಮಾಡಿ ಹಾಕಿ ಹೋಗಿದ್ದ ಒಂದು ಗಂಡಸಿನ ಹೆಣ ನೋಡಿದ್ದೇವು ಎನ್ನುವುದು ಸರಿ ಅಲ್ಲ. ಶವದ ಮೈ ಮೇಲೆ ಕೇವಲ ಪ್ಯಾಂಟ್ ಮಾತ್ರ ಇದ್ದು ಅದು ನಮ್ಮ ಊರಿನ ಶಿವ @ ರೇಣುಕಾರಾಧ್ಯನ ಶವ ಎಂದು ಗುರುತಿಸಿದೆವು ಎನ್ನುವುದು ಸರಿ ಅಲ್ಲ.

ದಿನಾಂಕ 30.10.2022 ರ ಮಧ್ಯಾಹ್ನ 2.00 ಗಂಟೆ ಸಮಯಕ್ಕೆ ನಾನು ಮತ್ತು ಚಂದ್ರೇಗೌಡ ನಿಂತು ಮಾತಾನಾಡುತ್ತಿದ್ದೇವು ಎನ್ನುವುದು ಸರಿ ಅಲ್ಲ. ಅದೇ ಸಮಯಕ್ಕೆ ಪೋಲಿಸರು ಆರೋಪಿ-2 ಮತ್ತು 3 ರವರನ್ನು ಅಲ್ಲಿಗೆ ಕರೆದುಕೊಂಡು ಬಂದರು ಎನ್ನುವುದು ಸರಿ ಅಲ್ಲ. ಆರೋಪಿ-2 ಮತ್ತು 3 ಹೇಳಿದ ಮೇರೆಗೆ ಕೊಲೆಗೆ ಉಪಯೋಗಿಸಿರುವ ದೊಣ್ಣೆ ಅವರು ತೋರಿಸಿ ಹಾಜರು ಪಡಿಸುವುದಾಗಿ ನಮಗೆ ಹೇಳಿದರು ಎನ್ನುವುದು ಸರಿ ಅಲ್ಲ. ಮೇಲೆ ಹೇಳಿದ ಆರೋಪಿಗಳು ಇಗ್ಗಲೂರಿಗೆ ಹೋಗುವ ಪುಟ್ಟಸ್ವಾಮಿಯವರ ಕಬ್ಬಿನ ಗದ್ದೆ ಮುಂಭಾಗದ ಗಿಡಗಳ ಪೊದೆಯಲ್ಲಿ ಬಚ್ಚಿಟ್ಟಿದ ದೊಣ್ಣೆಯನ್ನು ಆರೋಪಿ-3 ತೋರಿಸಿ ಹಾಜರುಪಡಿಸಿದ್ದು ಅದನ್ನು ಮಧ್ಯಾಹ್ನ 2.30 ರಿಂದ 3.15 ರವರೆಗೆ ಪಂಚನಾಮೆ ಮೂಲಕ ಪೋಲಿಸರು ವಶಪಡಿಸಿಕೊಂಡರು ಎನ್ನುವುದು ಸರಿ ಅಲ್ಲ. ಮೇಲೆ ಹೇಳಿದ ಸಮಯದಲ್ಲಿ ನಾನು ಕೂಡ ಹಾಜರಿದ್ದೆ ಎನ್ನುವುದು ಸರಿ ಅಲ್ಲ. ಈಗ ನಾನು ನೋಡುತ್ತಿರುವ ಪೋಟೊದಲ್ಲಿ ನಾನು ಇದ್ದು ಅದರಲ್ಲಿ ಆರೋಪಿ-3 ದೊಣ್ಣೆ ತಗೆದು ತೋರಿಸಿದ್ದಾರೆ ಎನ್ನುವುದು ಸರಿ ಇದೆ. ಎರಡು ಪೋಟೋಗಳನ್ನು **ನಿಪಿ-6 ಮತ್ತು 7** ಎಂದು ಗುರುತಿಸಲಾಯಿತು.

ದಿನಾಂಕ 30.10.2022 ರಂದು ಮೇಲೆ ಸೂಚಿಸಿದಂತೆ ನಡೆದಿರುವುದರ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-8** ಎಂದು ಗುರುತಿಸಲಾಯಿತು. ನನಗೆ ನಮ್ಮೂರಿನ ಶಿವು ಕೊಲೆ ಆದ ಬಗ್ಗೆ ಮತ್ತು ಪೋಲಿಸರು ಈ ಕುರಿತು ನಮ್ಮ ಮುಂದೆ

ಮಾಡಿದ ಪಂಚನಾಮೆ ಬಗ್ಗೆ ಎಲ್ಲಾ ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಪಾಟೀ ಸವಾಲುಃ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.